ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2002ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-I

(ಆ) ಪರ್ಯಾಲೋಚನಾ ಪ್ರಸ್ತಾವ : ಕರ್ನಾಟಕ ಸಿವಲ್ ಸೇವೆಗಳಲ್ಲಿಯೆ ಹುದ್ದೆಗಳಿವೆ ಮಿಸಲಾತಿ ಅಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣೆ ವಿಧೇಯಕ, 2002.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮೊನ್ನೆ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಅಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ವಿಧೇಯಕವನ್ನು ಮಂಡಿಸಿದ್ದು ಇದರ ಬಗ್ಗೆ ಚರ್ಚೆ ಮುಗಿದು ಅನುಮೋದನೆಯ ಹಂತದಲ್ಲಿ ನಿಂತಿತ್ತು, ಅದ್ದರಿಂದ ಮಾನ್ಯ ಸಭೆ ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ ಸೋಮಶೇಖರ್‌ರವರು ಒಂದೆರಡು ಮಾತುಗಳನ್ನು ಹೇಳಿದ್ದರು ಬಹಳ ಮುಖ್ಯವಾಗಿ the proposed Bill does not alter in any way affect the existing promotion policy of vacancy based roster, because we have some reservation about vacancy based reservation. ನಾವು ಶಬ್ದಗಳ ಬಳಕೆ ಮಾಡುವಾಗ ರಾಜ್ಯಾಂಗದ Art. 14(4)ರ ಇದನ್ನು ಬಳಸಿದ್ದೇವೆ, ಅದ್ದರಿಂದ ಅದಕ್ಕೂ ಇದಕ್ಕೂ ಯಾವ ರೀತಿಯ ತೊಂದರೆಯಾಗುವುದಿಲ್ಲ ಎನ್ನುವುದು ಒಂದು. 27-4-1978ರ ಮತ್ತು 24-6-1997ರ order relating to the Rules ಆ ಆದೇಶಕ್ಕಾಗಲಿ or the policy of reservation in promotion as stated in G.O. dt. 3.2.99 modified by the subsequent order on 13.4.99 is also in no way affect by this Notification. ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ as a matter of fact, this Bill seeks only to extend to the Government Servants belonging to Scheduled caste and Scheduled Tribes the consequential benfit under the 85th Constitution Amendment. To that limited extent only. ನಾವು ಏನು ಮಸೂದೆಯನ್ನು ತಂದಿದ್ದೇವೆ ಅದ್ದರಿಂದ ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಈಗಾಗಲೇ ಹೇಳಿದೆ, ಸುಪ್ರೀಂಕೋರ್ಟಿನಲ್ಲಿ ಇದರ ಬಗ್ಗೆ ಏನಾದರೂ ಪಿಟಿಷನ್ ಪೆಂಡಿಂಗ್ ಇವೆಯೇ ?

SRI D.B. CHANDREGOWDA : All matters connected with promotion, including the 85th amendment is pending in the Supreme Court. Subject to that only ನಾವು ಮಾಡುತ್ತಾ ಇದ್ದೇವೆ ಆರ್ಡಿನೆನ್ಸ್‌ಅನ್ನು ವ್ಯಾಲಿಡೇಟ್ ಮಾಡುತ್ತಿದ್ದೇವೆ ಶಾಸನ ಮಾಡುತ್ತಿದ್ದೇವೆ ಅಷ್ಟೆ.

ಶ್ರೀ ಬಿ. ಸೋಮಶೇಖರ್ : ತಾವು ತಂದಿರುವ ಮಸೂದೆಯ Headline ಏನಿತ್ತು, Government Servants Promotions, promoted on the basis of reservation to the posts, ಎಂದು ಇತ್ತಲ್ಲವೇ ಅದು ಸ್ವಲ್ಪ ambiguity ಇದ್ದಹಾಗೆ ಕಾಣಿಸುತ್ತದೆ. ಅದನ್ನು ತಾವು ತೆಗೆದುಬಿಡಿ. ಏಕೆಂದರೆ, ನಮ್ಮ ರಾಜ್ಯದಲ್ಲಿ vacancy based promotions ಆಗಿರುವುದರಿಂದ, ಇದೊಂದೇ ಮುಖ್ಯವಲ್ಲ ಅದರ ಜೊತೆಗೆ ಎಗ್ಸಿಜ್ಟಿಂಗ್ ಪಾಲಿಸಿ ಏನು ಇದೆ, ಜನರಲ್ ಕ್ಯಾಟಗರಿಗ್ಸೆ ಮತ್ತು ಎಸ್‌ಸಿ-ಎಸ್‌ಟಿಗ್ಸೆ ಒಂದೇ ಪಾಲಿಸಿ ಇದೆ. as far as the promotions are concerned, that is vacancy based promotions. ನಂತರ 2-3 ಆದೇಶಗಳನ್ನು ನಾವು ಹೊರಡಿಸಿದ್ದೇವೆ. 1997ರಲ್ಲಿ ನಮ್ಮ ಸರ್ಕಾರ ಇದ್ದಾಗ ಬ್ಯಾಕ್‌ಲಾಗ್ ವೇಕೆನ್ಸಿಯನ್ನು ಯಾವ ರೀತಿ ತುಂಬಬೇಕು ? ಅದಕ್ಕೆ ಯಾವ ಸೈಕಲ್‌ನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಏಕೆಂದರೆ, ಅದು Constitutional Amendment ಆಗಿದೆ. Art. 16(4)(b) ಅದು ಯಾವುದೇ ರೀತಿಯಲ್ಲೂ ಆಲ್ಟರ್ ಆಗುವುದಿಲ್ಲವೆನ್ನುವುದು, 13-4-99 ಇದರಲ್ಲಿ ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ಹೇಳಿದ್ದೇವೆ. "The reservation in promotion in favour of the persons belonging to SC/ST shall continue to operate by applying the existing roster to the vacancies." ಇದು ಯಾವುದೇ ರೀತಿಯಲ್ಲಿ ಆಲ್ಟರ್ ಆಗುವುದಿಲ್ಲವೆನ್ನುವುದಾದರೆ, ನಮ್ಮದೇನೂ ಅಭ್ಯಂತರವಿಲ್ಲ. 1997ರಲ್ಲಿ ಬ್ಯಾಕ್‌ಲಾಗ್ ಅಪಾಯಿಂಟ್‌ಮೆಂಟ್ ಯಾವ ರೀತಿ ತುಂಬಬೇಕೆನ್ನುವುದರ ಬಗ್ಗೆ ಏನು ಆದೇಶ ಹೊರಡಿಸಿದ್ದೀರಿ ಅದಕ್ಕೆ ಏನೂ ತೊಂದರೆ ಆಗಬಾರದು, 1957 interse seniority See 4 & 4A of Seniority Rules of 1957 ಅದರಲ್ಲಿ 4 ಅಂಡ್ 4 ಅನ್ನು ಸುಪ್ರೀಂ ಕೋರ್ಟಿನವರುರದ್ದು ಮಾಡಿದರು, ಅದರಿಂದಲೇ ಈ ಪರಿಸ್ಥಿತಿ ಬಂದು ಪುನಃ ಅದನ್ನು ರೀ-ಇಂಟ್ರಡ್ಯೂಸ್ ಮಾಡುತ್ತೇವೆಂದು ಈ ಬಿಲ್‌ನಲ್ಲಿ ಇದ್ದರೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅದಕ್ಕಾಗಿ ಸ್ಪಷ್ಟವಾಗಿ ಹೇಳಿದೆ, Art. 16(4)(a) the language used is, promotion to the posts. ಅದೇ ಶಬ್ದವನ್ನು ಇಲ್ಲಿ ಬಳಕೆ ಮಾಡಿದ್ದೇವೆ. ಎರಡನೇಯದಾಗಿ ಈ ಸಬರ್‌ವಾಲ ಕೇಸ್‌ನಲ್ಲಿ ಪೋಸ್ಟ್ ಎನ್ನುವುದರ ಬಗ್ಗೆ ವಿವರಣೆ ಕೊಟ್ಟಿದ್ದಾರೆ. 'Post' means, appointment job, office or employment ಅನ್ನು ಶಬ್ದ ಬಳಸಿದ್ದಾರೆ, the postition to which the person is appointed; so, here it shows the accelerated seniority, the person will be appointed only to the post. ಆದ್ದರಿಂದ ಈ ಲಿಮಿಟೆಡ್ 85ನೇ ಸಂವಿಧಾನ ತಿದ್ದುಪಡಿಯ ಆದೇಶದ ಆಧಾರದ ಮೇಲೆ ಮತ್ತು ವಿವಿಧ ಹಂತಗಳಲ್ಲಿ ಸರ್ವೋಚ್ಚನ್ಯಾಯಾಲಯ ಕೊಟ್ಟ ತೀರ್ಪಿನ್ನು ಆಧರಿಸಿ ಈ ಮಸೂದೆಯನ್ನು ಜಾರಿಗೆ ತಂದಿದ್ದೇವೆಯೇ ಹೊರತೂ ಅದಕ್ಕೆ ಹಿಂದೆ ಆಗಿರತಕ್ಕಂಥ ಆದೇಶಗಳಿಗೂ ಈ ಮಸೂದೆಗೆ ಯಾವ ಬಾಧಕವೂ ಆಗುವುದಿಲ್ಲ ಯಾವ ಸಂಬಂಧವೂ ಇಲ್ಲವೆಂದು ಮಾನ್ಯ ಸದಸ್ಯರಿಗೆ ಈ ಮೂಲಕ ಆಶ್ವಾಸನೆ ಕೊಟ್ಟು ಈ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ತಂದಿರುವ ಈ ಮಸೂದೆ ನೊಂದ ಜನಾಂಗಕ್ಕೆ ನ್ಯಾಯವನ್ನು ನೀಡತಕ್ಕಂಥ ನಿರ್ಧಾರಕ್ಕೆ ನನ್ನ ಸಂಪೂರ್ಣ ಸಹಮತ ಹಾಗೂ ಮೆಚ್ಚಿಗೆ ಇದೆ. ಆದರೆ, we are enacting this Bill consequent to the 85th constitutional amendment. We are given to understand that the 85th constitutional amendment is subjected to litigation and is pending before the Supreme Court. ನಾನು ಮಾನ್ಯ ಕಾನೂನು ಸಚಿವರಲ್ಲಿ ಏನು ವಿವರಣೆ ಬಯಸಿದನೆಂದರೆ, ಹಿಂದೆ ಯಾವುದಾದರೂ ಸಂದರ್ಭದಲ್ಲಿ at that time I do not know whether any amendment made previous are subjected to the litigation before the Supreme Court or whether the supreme Court has taken any decision with regard to those amendments. But now I want a clarification from Hon'ble Law Minister ಈ ಹಿಂದೆ 85ರ ತಿದ್ದುಪಡಿಯ ಹಿಂದೆ ನಮ್ಮ ಪಾರ್ಲಿಮೆಂಟ್ ಮಾಡತಕ್ಕಂಥ ಯಾವುದೇ ಸಂವಿಧಾನಿಕ ತಿದ್ದುಪಡಿಯನ್ನು ಸುಪ್ರೀಂಕೋರ್ಟಿನಲ್ಲಿ ಪ್ರಶ್ನೆ ಮಾಡಿರುವುದುಂಟೆ ? ಮಾಡಿದ್ದರೆ ಸುಪ್ರೀಂ ಕೋರ್ಟಿನವರು ಅದನ್ನು struck down ಮಾಡಿದಿಯೇ ? ಇವತ್ತು ನಾವೇನು ಚರಿತ್ರಾರ್ಹವಾದ ಮಸೂದೆಯನ್ನು ತಂದಿದ್ದೇವೆ ಒಂದು ವೇಳೆ ಸುಪ್ರೀಂಕೋರ್ಟಿನವರು, ಏಕೆಂದರೆ, because we are given to understand that the matter is still pending before the Supreme Court ಅಲ್ಲಿಂದ ಯಾವುದಾದರೂ ತೀರ್ಮಾನ ಬಂದಂಥ ಸಂದರ್ಭದಲ್ಲಿ, ನಾವು ಈಗ ಏನು ಮಸೂದೆ ತಂದಿದ್ದೇವೆ ಅದರ ಮೂಲಕ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ನಾವು ಬಡ್ತಿಯನ್ನು ಕೊಟ್ಟಂಥ ಸಂದರ್ಭದಲ್ಲಿ, ನಾಳೆ ಏನಾದರೂ ನ್ಯಾಯಾಲಯದ ತೀರ್ಮಾನ ಹೆಚ್ಚು ಕಡಿಮೆಯಾದಾಗ ನಾವು ಏನು ಅವರಿಗೆ ಪರಿಹಾರವನ್ನು ಕೊಡಬಹುದು ? ಏಕೆಂದರೆ, ಈಗ ಏನಾಗಿದೆ ಎಂದರೆ, ಈಗಾಗಲೇ ಸರ್ಕಾರಿ ಅಧಿಕಾರಿಗಳಿಗೆ ಬಡ್ತಿ ಕೊಡುವಲ್ಲಿ ಉಂಟಾಗಿರುವ ಗೊಂದಲ, ಒಂದು ಉದಾಹರಣೆಯನ್ನು ತಮಗೆ ಹೇಳುವುದಾದರೆ on the basis of promotion ನಮ್ಮತುಮಕೂರಿನಲ್ಲಿ ಒಬ್ಬ ಎಗ್ಸಿಕ್ಯೂಟೀವ್ ಇಂಜಿನಿಯರ್ ಬಂದರು. He is a scheduled caste officer ; immediately he was depromoted and he became 6-7 ತಿಂಗಳುಗಳಲ್ಲಿ ತಕ್ಷಣದಲ್ಲಿಯೇ Asst. Executive Engineer ಹುದ್ದೆಯಲ್ಲಿದ್ದರು and once again he was given promotion and he became the Executive Engineer. ಈ ರೀತಿಯಾದ ಗೊಂದಲವನ್ನು ನಿರ್ಮಾಣ ಮಾಡಿದರೆ ಏನಾಗುತ್ತದೆಂದರೆ, ಎಲ್ಲೋ ಒಂದು ಕಡೆ ನಮ್ಮ ಅಭಿವೃದ್ಧಿ ಕಾಮಗಾರಿಗಳ ಮೇಲೆ ಒತ್ತಡ ಬೀಳುತ್ತದೆ ಹೀಗಾಗಿ ಅದರಿಂದ ನಮಗೆ ತೊಂದರೆಯಾಗುವ ಸಂದರ್ಭ ವಿರುವುದರಿಂದ ಇಂಥ ಪರಿಸ್ಥಿತಿಯಲ್ಲಿ ನಾನೇನು ಮಾನ್ಯ ಕಾನೂನು ಸಚಿವರಿಂದ ನಿರೀಕ್ಷಣೆ ಮಾಡುತ್ತೇನೆಂದರೆ, Further this enactment should not be subjected to the litigation before the Court and unnecessarily we should not put them in confusion. ಅದ್ದರಿಂದ ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ಹಿಂದೆ ಯಾವುದಾದರೂ ಒಂದು constitutional amendment ಸುಪ್ರೀಂಕೋರ್ಟಿನಲ್ಲಿ ಕ್ವೊಶ್ಚನ್ ಆಗಿದ್ದು ಉಂಟೆ ಅಥವಾ ಏನಾದರೂ struck down ಆಗಿರುವ ನಿದರ್ಶನಗಳಿವೆಯೇ ? ಈ ಬಗ್ಗೆ ನನಗೆ ಮಾಹಿತಿಯನ್ನು ದಯಮಾಡಿ

ಕೊಡಬೇಕೆಂದು ಕೇಳಿ, ಮತ್ತೊಮ್ಮೆ I make it very clear that we welcome this enactment. This is a revolutionary enactment I would like to say.

ಶ್ರೀ ಡಿ.ಬಿ. ಚಂದ್ರೇಗೌಡ : ಬೇಕಾದಷ್ಟು ಹಿಂದೆ ಕೇಸ್‌ಗಳು ಆಗಿವೆ ಅದಕ್ಕೆ ಉದಾಹರಣೆ ಕೊಡುವುದಕ್ಕೆ ಹೋಗುವುದಿಲ್ಲ. Basic structure of the Constitution ಗೆ ತೊಂದರೆಯಾಗತಕ್ಕಂಥ ಸಂದರ್ಭಗಳು ಬಂದಾಗ ಸುಪ್ರೀಂಕೋರ್ಟ್‌ಯಾವಾಗಲೂ ಮಧ್ಯ ಪ್ರವೇಶ ಮಾಡುತ್ತದೆ. For example, Keshavanand Bharati's case, a very famous case in those days. ಆದರೆ pending the writ petition, it does not bar the legislation. We are legislating certain things which has no relevance so for the pending writ petitions in the Supreme Court or in anywhere in the High Courts. The fact of the matter is, this legislation. ಈಗಾಗಲೇ ನಾವೇನು ಆರ್ಡಿನೆನ್ಸ್ ಮಾಡಿದ್ದೇವೆ, that is also questioned, but no stay order has been issued. Therefore, there is no bar for legislating this bill.

SRI B. SOMASEKHAR : The ordinance which you have promulgated is under challenge in the Supreme Court, not the constitutional amendment to Art. 16 (4)(a). Is 16(4)(a) challenged ?

2.10 ಪಿಎಂ

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಎಲ್ಲವನ್ನೂ ಕೂಡ ಪ್ರಶ್ನೆ ಮಾಡುತ್ತಾರೆ. ಹಾಗೆಯೇ ಇವತ್ತಿನದಿವಸ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟನ್ನೂ ಸಹ ಪ್ರಶ್ನೆ ಮಾಡಿದ್ದಾರೆ. ಹಾಗೆಯೇ ಈ ಒಂದು ಶಾಸನವನ್ನು ಕೂಡ ಪ್ರಶ್ನೆ ಮಾಡಿದ್ದಾರೆ. ಆದರೆ, ಇದಕ್ಕೆ ಸ್ಟೇ ಕೊಟ್ಟಿಲ್ಲ. Therefore, ಅಲ್ಲಿ ಪ್ರಶ್ನೆ ಮಾಡಿರತಕ್ಕಂಥದ್ದು it is not a bar for legislating.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುದ್ದಹನುಮೇಗೌಡರು ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ, ಒಂದು ವೇಳೆ ಇವರಿಗೆ ಪ್ರಮೋಷನ್ ಕೊಟ್ಟಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ಸೆಟ್-ಅಸೈಡ್ ಆದರೆ ಏನು ಮಾಡುತ್ತೀರಿ ?

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಕೂಡ ಸೀನಿಯರ್ ಅಡ್ವೋಕೇಟ್ ಆಗಿದ್ದೀರಿ. ಸುಪ್ರೀಂ ಕೋರ್ಟ್‌ನಲ್ಲಿ ಸೆಟ್-ಅಸೈಡ್ ಆದರೆ ಏನು ಮಾಡಲಾಗುತ್ತದೆ ಎಂದರೆ, the order gets set aside ; that is there.

SRI K.N. SUBBA REDDY : What he says ಪ್ರಮೋಷನ್ ಕೊಟ್ಟು ಮತ್ತೆ ಡಿಮೋಷನ್ ಮಾಡತಕ್ಕಂಥ ಸಮಸ್ಯೆ ಆಗಬಾರದು ಎನ್ನತಕ್ಕಂಥದ್ದುನ್ನು Mr. Muddahanume Gowda made it very clear.

SRI D.B. CHANDRE GOWDA : This legislation-for that matter, all the legislation, are subject to judicial scrutiny and judicial judgements. ಅಲ್ಲಿ ಬೇಕಾದಷ್ಟು ಆಗಿವೆ. ಅದು ನಿಮಗೆ ಗೊತ್ತಿಲ್ಲವೆ ? ಮಾನ್ಯ ಸುಬ್ಬಾರೆಡ್ಡಿಯವರು ಅಡ್ವೋಕೇಟ್ ಅಸೋಸಿಯೇಷನ್‌ಗೆ ಅಧ್ಯಕ್ಷರಾಗಿದ್ದಾರೆ. ಹಾಗೆಯೇ ಈ ರೀತಿಯಾದ ಸಾವಿರಾರು ಕೇಸ್‌ಗಳನ್ನು ನೋಡಿರುತ್ತಾರೆ. This is a fundamental thing.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ಜೇಷ್ಠತೆಯ ನಿರ್ಧಾರಣೆ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5ರವರೆಗೆ ಎಂರಡೂ ಸೇರಿದಂತೆ,

ಅಧ್ಯಕ್ಷರು : "ಖಂಡ 2 ರಿಂದ 5ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5ರವವೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ;"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣೆ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇನ್ನೂ ಪ್ರಶ್ನೋತ್ತರ ಬಾಕಿ ಇದೆ. ಹಾಗೆಯೇ, ಖಾಸಗಿ ವಿಧೇಯಕ ಮತ್ತು ಗಮನಸೆಳೆಯುವ ಸೂಚನೆಗೆ ಸಂಬಂಧಪಟ್ಟಂಥ ವಿಷಯದ ಬಗ್ಗೆ ಎರಡು ಗಂಟೆಗಳ ಕಾಲ ಚರ್ಚೆ ಮಾಡೋಣ. ಆದ್ದರಿಂದ, ಈಗ 45 ನಿಮಿಷಗಳ ಕಾಲ ಸದನವನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರಿ ಎರಡು ಗಂಟೆಗಳ ಕಾಲ ಚರ್ಚೆ ಮಾಡಿ 5 ಗಂಟೆಗೆ ಸದನವನ್ನು ಅರ್ಡ್ಜನ್ ಮಾಡಬಹುದು. ಚರ್ಚೆ ಮಾಡುವುದಕ್ಕೆ ವಿರೋಧಪಕ್ಷದವರೆಲ್ಲರೂ ತಯಾರಿದ್ದೇವೆ.

ಅಧ್ಯಕ್ಷರು : ಮಾನ್ಯ ಶ್ರೀಕಂಠಯ್ಯನವರದ್ದು ಒಂದು ಸ್ಮಾಲ್ ಬಿಲ್ ಇದೆ. ಅದನ್ನು ಈಗ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಅವರ ಹಿರಿತನಕ್ಕೆ ಮೊನ್ನೆ ದಿವಸ ಒಂದು ಬಿಲ್‌ನ್ನು ಚರ್ಚೆ ಮಾಡದೆ ಪಾಸ್ ಮಾಡಿಕೊಟ್ಟಿದ್ದೇವೆ. He should alos help us.

SRI H.C. SRIKANTAIAH : This is also the same thing.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕವನ್ನು ಇವತ್ತೆ ಮಂಡಿಸಬೇಕಾಗುತ್ತದೆ. ಹಾಗೆಯೇ, ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಮಾನ್ಯ ಸಚಿವರು ಮಂಡಿಸಲಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕವನ್ನು ಇವತ್ತೆ ಮಂಡಿಸುವುದಕ್ಕೆ ಅವಕಾಶ ಕೊಡಬೇಕು. ಏಕೆಂದರೆ, ಸದರಿ ಬಿಲ್‌ನ್ನು ಸೋಮವಾರ ಮಂಡಿಸುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಈ ಸದನ ಒಪ್ಪಿದರೆ, ಸದರಿ ಬಿಲ್‌ನ್ನು ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳಬಹುದು. ಏನು ತೊಂದರೆಯಾಗುವುದಿಲ್ಲ. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 18 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 5ನೇ ಆಗಸ್ಟ್ 2002ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

3 ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ ಎನ್‌ಆರ್‌ಡಿ ಹಣವನ್ನು ಷೇರುಗಳಾಗಿ ಪರಿವರ್ತಿಸಿರುವುದು

46 (170) **ಶ್ರೀ ಶಿವಣ್ಣ ಎಸ್.** (ತುಮಕೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ ಇದರ "ಇ" ತರಗತಿ ಸದಸ್ಯರಿಗೆ ಕಾರ್ಖಾನೆಗೆ ಕಬ್ಬು ಪೂರೈಕೆ ಮಾಡಿ ಕಾರ್ಖಾನೆಯ ಬೈಲಾ ಪ್ರಕಾರ ಜಮೀನು ಹೊಂದಿರುವ ಇವರುಗಳ ಎನ್‌ಆರ್‌ಡಿ ಹಣವನ್ನು ಷೇರುಗಳಾಗಿ ಪರಿವರ್ತಿಸಿ ಇವರುಗಳನ್ನು "ಎ" ತರಗತಿ ಸದಸ್ಯರುಗಳನ್ನಾಗಿ ಮೊದಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಕ್ಕರೆ ನಿರ್ದೇಶಕರು ದಿ: 6-8-1988 ರಂದು ಕಾರ್ಖಾನೆಗೆ ಆದೇಶಿಸಿರುವುದು ನಿಜವೇ :

ಆ) ಈ ರೀತಿ ಮಾಡದೆ ಇವರುಗಳ ಎನ್‌ಆರ್‌ಡಿ ಹಣವನ್ನು ಏರಿಯಾ ಡೆವಲಪ್‌ಮೆಂಟ್ ಫಂಡ್‌ಗೆ ವರ್ಗಾಯಿಸುವುದೆಂದು ದಿ: 4-7-1995 ರಂದು ನಡೆದಂತಹ ಕಾರ್ಖಾನೆಯ ಸರ್ವ ಸದಸ್ಯರ ಸಭೆಯಲ್ಲಿ ಉಪ ನಿಯಮ 37 (1)ಕ್ಕೆ ತಿದ್ದುಪಡಿ ಮಾಡಿರುವುದಕ್ಕೆ ಸಕ್ಕರೆ ನಿರ್ದೇಶಕರು ಒಪ್ಪಿಗೆ ಕೊಟ್ಟಿರುವುದು ಸಹ ನಿಜವೆ :

ಇ) ಹೌದಾದಲ್ಲಿ ಸರ್ಕಾರದ ನಿರ್ದೇಶನಕ್ಕೆ ವಿರುದ್ಧವಾದಂತಹ ಇಂತಹ ತಿದ್ದುಪಡಿಗೆ ಸಕ್ಕರೆ ನಿರ್ದೇಶಕರು ಒಪ್ಪಿಗೆ ಕೊಟ್ಟಿದ್ದು ಸರಿಯೇ :